ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 973.

ಮೃತಪಟ್ಟ ಕಾನಖಾನಹಳ್ಳೀ ತಾಲ್ಲೂಕು ಬರಣಹಳ್ಳೀಲಿ ವಾಸವಾಗಿ ಯಿದ್ದ ಪಾಪಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಬೆಂಗಳೂರು ಬ್ಯಾಳೆಕಾಳು ನರಸುಹ್ಮಣ್ಣನು ಮೃತಪಟ್ಟ ಸದರೀ ಪಾಪಂಣನಿಗೆ ಅಳಿಯನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಗೊಲ್ಲರಪೇಟೇ ಸ್ಥಳದ ನರಸುಹ್ಮಣ್ಣನು ಬರಣಹಳ್ಳೀ ವಾಸಸ್ಥನಾಗಿ ಮೃತಪಟ್ಟ ಪಾಪಂಣನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನರಸುಹ್ಮಣ್ಣನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾ|| 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಪಂಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅಕ್ಟೋಬರ್ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನೀ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 539.

ಮೃತಪಟ್ಟ ರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ತಿಮ್ಮಮ್ಮನವರು, ಮೃತಪಟ್ಟ ಸದರೀ ರಾಮಯ್ಯನವರಿಗೆ ತಾಯಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರ ಮುಂಡಿಮೊಹಲಾ ಸ್ಥಳದ ಸದರೀ ತಿಮ್ಮಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಯ್ಯನವರ ಜಿಂದಗೀ ಬಗ್ಯಾಗಿ ಬರತಕ್ಕ 150 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ತಿಮ್ಮಮ್ಮನವರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಯ್ಯನವರ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅಕ್ಟೋಬರ್ 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಯಸ್. ಹೇವಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ನಂ. 12—85—86ನೇ ಇಸವಿ.

ತಾರೀಖು 2ನೇ ನವಂಬರ್ 1887.

ಮೈಸೂರ ಡಿಸ್ಟ್ರಿಕ್ಟ್ ಗುಂಡ್ಲು ತಾಲ್ಲೂಕು ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತ್ಎವಜನ್ನು ಕ್ರಮೆವಾದ ವಾರಸ್‌ದಾರ್‌ಗಳಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರೆಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಮೇರಿಗೆ ನಾಶ ಮಾಡಲ್ಪಡುತ್ತೆ:—